**ಹಾನಗಲ್‌ನ ವ್ಯವಹಾರ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ**

**ದಂಡಧಿಕಾರಿಗಳರವರ ನ್ಯಾಯಾಲಯದಲ್ಲಿ, ಹಾನಗಲ್**

**ಉಪಸ್ಥಿತರುಃ** ಶ್ರೀಮತಿ ಫಕೀರವ್ವ ಕೆಳಗೇರಿ, *ಬಿ.ಎ.,ಎಲ್ ಎಲ್ ಬಿ.*

ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ

ದಂಡಾಧಿಕಾರಿಗಳು, ಹಾನಗಲ್.

**ಅಸಲ ದಾವಾ ನಂ.182/2019**

**ದಿನಾಂಕಃ 17 ನೇ ಫೆಬ್ರುವರಿ 2020**

ವಾದಿಯರು : ಗಿರಿಜವ್ವ ಕೋಂ ಶಂಕ್ರಪ್ಪಾ ಮೂಡಿ ಹಾಗೂ ಇತರರು

(ವಕೀಲರಾದ ಶ್ರೀ ಜಿ.ಎಸ್.ಕೆ, ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

**ವಿರುದ್ಧ**

ಪ್ರತಿವಾದಿಯರು : ನಾಗೇಂದ್ರಪ್ಪ ತಂದೆ ಯಲ್ಲಪ್ಪ ಅರಳೇಶ್ವರ @ ಕರಿಭಿಮಣ್ಣನವರ ಹಾಗೂ ಇತರರು.

(ಪ್ರತಿವಾದಿ ನಂ.1 ವಕೀಲರಾದ ಶ್ರೀ ಎಂ.ಕೆ.ಬಿ, ಇವರಿಂದ ಪ್ರತಿನಿಧಿಸಲ್ಪಟ್ಟಿದ್ದಾರೆ)

(ಪ್ರತಿವಾದಿ ನಂ.2 ಮತ್ತು 4 ನೇದವರು In-person)

(ಪ್ರತಿವಾದಿ ನಂ.3 ಏಕತರ್ಫಿಯಾಗಿರುತ್ತಾರೆ)

**ಮಧ್ಯಂತರ ಅರ್ಜಿ ಸಂಖ್ಯೆ-1**

ಅರ್ಜಿದಾರ/1 ನೇ ವಾದಿ : ಗಿರಿಜವ್ವ ಕೋಂ ಶಂಕ್ರಪ್ಪಾ ಮೂಡಿ ಹಾಗೂ ಇನ್ನೊಬ್ಬರು.

**ವಿರುದ್ಧ**

ಎದುರುದಾರರು : ನಾಗೇಂದ್ರಪ್ಪ ತಂದೆ ಯಲ್ಲಪ್ಪ ಅರಳೇಶ್ವರ @ ಕರಿಭಿಮಣ್ಣನವರ ಹಾಗೂ ಇತರರು.

**ಮಧ್ಯಂತರ ಅರ್ಜಿ ಸಂಖ್ಯೆ-1 ಕ್ಕೆ ಆದೇಶ**

1 ನೇ ವಾದಿ/ಅರ್ಜಿದಾರ ತನ್ನ ಪ್ರಮಾಣಪತ್ರದಲ್ಲಿ ಹೇಳುವುದೇನೆಂದರೆ, ದಾವಾ ಶೆಡ್ಯೂಲ ಪೈಕಿ 2(ಎ)3, 2(ಎ)5, 2(ಎ)6 ಮತ್ತು 2(ಎ)7 ನೇ ಆಸ್ತಿಗಳನ್ನು ಪ್ರತಿವಾದಿಯಾಗಲೀ ಅಥವಾ ಅವರ

ತರ್ಫೆ ಬೇರೆ ಯಾರೇ ಆಗಲೀ ಮಾರಾಟ/ವಿಲೇವಾಟ ವ ಖಾತೆ ಬದಲಾವಣೆ ಮಾಡದಂತೆ ಅವರುಗಳ ಮೇಲೆ ದಾವೆ ಅಂತಿಮವಾಗಿ ನಿಖಾಲಿಯಾಗುವವರೆಗೆ ತಾತ್ಪೂರ್ತಿಕ ನಿರ್ಭಂದಕಾಜ್ಞೆಯನ್ನು ನೀಡುವಂತೆ ಪ್ರಾರ್ಥಿಸಿರುತ್ತಾರೆ.

2. ಅರ್ಜಿದಾರ/1ನೇ ವಾದಿಯು ತನ್ನ ಅರ್ಜಿಯ ಜೊತೆಗೆ ಇಟ್ಟಿರುವ ಪ್ರಮಾಣ ಪತ್ರದಲ್ಲಿ, ದಾವಾದಾಸ್ತಿಗಳು ವಾದಿಯರ ತಂದೆಯ ಸ್ವಯಾರ್ಜಿತ ಆಸ್ತಿಗಳಾಗಿದ್ದು, ಸದರಿ ಆಸ್ತಿಗಳು ವಾದಿಯರ ತಂದೆಗೆ ದತ್ತಕ ನಾತೆಯಿಂದ ಬಂದಿದ್ದು, ನನ್ನ ತಂದೆಗೆ ಅವರ ಜನಕ ತಂದೆಯಿಂದ ಯಾವುದೇ ಆಸ್ತಿಗಳು ಪ್ರಾಪ್ತವಾಗಿರುವುದಿಲ್ಲ. ವಾದಿಯರು ಮುಂದುವರೆದು ಹೇಳುವುದೇನೆಂದರೆ ದಾವಾದಾಸ್ತಿಗಳಿಗೆ ಸಂಬಂಧಿಸಿದಂತೆ ವಾದಿಯರ ತಂದೆ ಯಾವುದೇ ವ್ಯವಸ್ಥೆ ಮಾಡದೇ ದಿನಾಂಕ 12-04-2016 ರಂದು ಪೋತಿಯಾಗಿದ್ದು, ವಾದಿಯರ ತಾಯಿಯು ಸಹ ದಿನಾಂಕ 28-10-2018 ರಂದು ಪೋತಿಯಾಗಿದ್ದು ಸದರಿಯವರು ಸಹಿತ ದಾವಾದಸ್ತಿಗಳಲ್ಲಿ ಯಾವುದೇ ವ್ಯವಸ್ಥೆ ಮಾಡದೇ ಪೋತಿಯಾಗಿರುತ್ತಾರೆ. ವಾದಿಯರ ತಂದೆ ತಾಯಿಗಳು ಅವರ ಜೀವಿತಾವಧಿಯಲ್ಲಿ ದಾವಾದಾಸ್ತಿಗಳನ್ನು ಯಾವುದೇ ರೀತಿಯಿಂದ ಹಿಸ್ಸೆ ಮಾಡಿರುವುದಿಲ್ಲ. ದಾವಾದಾಸ್ತಿಗಳಿಗೆ ಸಂಬಂಧಿಸಿದ ವಾದಿಯರ ತಂದೆಯ ಬೆನ್ನ ಹಿಂದೆ ಅವರಿಗೆ ಮಾಹಿತಿ ಇಲ್ಲದೇ ದಾವಾ ಶೆಡ್ಯೂಲ್ ಆಸ್ತಿಗಳನ್ನು 1ರಿಂದ 4ನೇ ಪ್ರತಿವಾದಿಯರು ತಮ್ಮ ಹೆಸರಿನಲ್ಲಿ ಕಂದಾಯ ಅಧಿಕಾರಿಗಳೊಂದಿಗೆ ಮಿಲಾಪಿಯಾಗಿ ದಾಖಲಿಸಿಕೊಂಡಿರುತ್ತಾರೆ. ದಾವಾದಾಸ್ತಿಗಳು ತಮ್ಮ ಹೆಸರಿನಲ್ಲಿರುವುದನ್ನು ದುರುಪಯೋಗ-ಪಡಿಸಿಕೊಂಡು ಅವುಗಳನ್ನು ಗೈರುವಿಲೇವಾಟ/ವರ್ಗಾವಣೆ ಮಾಡುವ ತಜವಿಜಿಯಲ್ಲಿರುತ್ತಾರೆ. ಒಂದು ವೇಳೆ ಸದರಿ ಅರ್ಜಿಯನ್ನು ತಿರಸ್ಕರಿಸಿದರೆ ವಾದಿಯರ ಹಿಸ್ಸಾ ಹಕ್ಕು ನಷ್ಟವಾಗುತ್ತದೆ. ಈ ಮಧ್ಯಂತರ ಅರ್ಜಿಯನ್ನು ದಾಖಲಿಸಿ ಪ್ರತಿವಾದಿಯರಾಗಲೀ ಅಥವಾ ಅವರ ಅವರ ತರ್ಫೆ ಯಾರೇ ಆಗಲಿ ದಾವಾ ಆಸ್ತಿಗಳನ್ನು ಗೈರು ವಿಲೇವಾರಿ ವ ಮಾರಾಟ ಮಾಡದಂತೆ ಸದರಿ ಪ್ರತಿವಾದಿಯರ ವಿರುದ್ದ ತಾತ್ಕಾಲಿಕ ತಾಕೀದಿ ಹುಕ್ಮು ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ತಮ್ಮ ವಕೀಲರ ಮೂಲಕ ಹಾಜರಾಗಿದ್ಧು, ಯಾವುದೇ ತಕರಾರನ್ನು ಸಲ್ಲಿಸಿರುವುದಿಲ್ಲ.

3. ವಾದವನ್ನು ಆಲಿಸಿರುತ್ತೇನೆ. ದಾಖಲೆಗಳನ್ನು ಪರಿಶೀಲಿಸಿದ್ದೇನೆ. ನನ್ನ ಪರಿಗಣನೆಗೆ ಈ ಕೆಳಗಿನಂತೆ ಅಂಶಗಳು ಉದ್ಭವಿಸುತ್ತವೆ.

1. ಅರ್ಜಿದಾರ/ವಾದಿಯರ ತನ್ನ ಪರವಾಗಿ ಮೇಲ್ನೋಟಕ್ಕೆ ಉತ್ತಮವಾದ ಕೇಸು ಇದೆಯೆಂದು ತೋರಿಸಿ ಕೊಡುವರೇ?

2. ಅರ್ಜಿದಾರ/ವಾದಿಯರು ತನ್ನ ಪರವಾಗಿ ಅನುಕೂಲತೆಯ ಸಂತುಲನೆ ಇದೆಯೆಂದು ತೋರಿಸಿ ಕೊಡುವರೇ?

3. ಅರ್ಜಿದಾರ/ವಾದಿಯರು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡದೆ ಇದ್ದರೆ ತನಗೆ ತುಂಬಲಾರದ ನಷ್ಟ, ಕಷ್ಟ ಮತ್ತು ತೊಂದರೆ ಉಂಟಾಗುತ್ತದೆ ಎಂದು ತೋರಿಸಿ ಕೊಡುವರೆ?

4. ಯಾವ ಆದೇಶ?

4. ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿದ್ದೇನೆ.

ಅಂಶ ನಂ.1 ರಿಂದ 3 ಃ ಸಕಾರಾತ್ಮಕವಾಗಿ

ಅಂಶ ನಂ.4 ಃ ಅಂತಿಮ ಆದೇಶದಂತೆ ಈ ಕೆಳಗಿನ ಕಾರಣಗಳಿಗಾಗಿಃ

**ಕಾರಣಗಳು**

**5**. **ಅಂಶ ನಂ.1 ರಿಂದ 3**ಃ ಸದರಿ ಅಂಶಗಳು ಒಂದಕ್ಕೊಂದು ಅಂತರ ಸಂಬಂಧವನ್ನು ಹೊಂದಿರುವುದರಿಂದ ಮತ್ತು ಸಂಗತಿಗಳ ಪುನರಾವರ್ತನೆಯಾಗುವುದನ್ನು ತಡೆಯಲು ಅವುಗಳನ್ನು ಒಟ್ಟಿಗೆ ಚರ್ಚಿಸಲಾಗಿದೆ.

6. ವಾದಿಯರು ಮೇಲ್ನೋಟಕ್ಕೆ ತಮ್ಮ ಪ್ರಕರಣವನ್ನು ಸಾಬೀತುಪಡಿಸುವ ನಿಟ್ಟಿನಲ್ಲಿ ಹಿರೂರ ಗ್ರಾಮದ ರಿಸ ನಂ.345/1, 30/1, 32/1, 32/2, 89/1, 89/2 ಮತ್ತು 89/3 ನೇದವುಗಳಿಗೆ ಸಂಬಂಧಿಸಿದ ಪಹಣಿ ಪತ್ರಿಕೆಗಳನ್ನು, ಪಂಚಾಯತಿ ಆಸ್ತಿ ನಂ.32, 31, 66/ಎ ಮತ್ತು 66/ಎ ನೇದ್ದವುಗಳಿಗೆ ಸಂಬಂಧಿಸಿದ ಕರಾಕರಣೆ ಯಾದಿಗಳನ್ನು ಹಾಜರುಪಡಿಸಿರುತ್ತಾರೆ. ಮೇಲ್ಕಾಣಿಸಿದ ಎಲ್ಲ ದಾಖಲಾತಿಗಳನ್ನು ಪರಿಶೀಲಿಸಿದಾಗ ಪ್ರತಿವಾದಿ ನಂ.1 ರಿಂದ 4 ನೇದವರ ಹೆಸರು ದಾಖಲಾಗಿರುವುದು ಕಂಡುಬರುತ್ತದೆ.

7. ಯಾವುದೇ ಪ್ರಕರಣದಲ್ಲಿ ನ್ಯಾಯಾಲಯವು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಬೇಕಾದರೆ ದಾವಾ ಆಸ್ತಿಯು ಮೇಲ್ನೋಟಕ್ಕೆ ವಾದಿಯರ ಸ್ವಾಧೀನದಲ್ಲಿದೆಯೇ ಎಂಬುದನ್ನು ಗಮನಿಸಬೇಕಾಗುತ್ತದೆ. ವಾದಿಯರು ಹಾಜರುಪಡಿಸಿದ ಪಹಣಿ ಪತ್ರಿಕೆಗಳನ್ನು ಮತ್ತು ಕರಾಕರಣೆಯಾದಿಗಳನ್ನು ಪರಿಶೀಲಿಸಲಾಗಿ, ಪ್ರತಿವಾದಿ ನಂ.1 ರಿಂದ 4 ನೇದವರ ಹೆಸರು ದಾಖಲಾಗಿರುವುದು ಕಂಡುಬರುತ್ತದೆ. ವಾದಿಯರ ಪ್ರಕಾರ ದಾವಾ ಶೆಡ್ಯೂಲ ಆಸ್ತಿಗಳು ವಾದಿಯರ ತಂದೆಗೆ ದತ್ತಕ ನಾತೆಯಿಂದ ಬಂದಂತಹ ಆಸ್ತಿಗಳಾಗಿದ್ದು, ಸದರಿಯವರ ತಂದೆ ತಾಯಿಗಳ ಜೀವಿತಾವಧಿಯಲ್ಲಿ ಯಾವುದೇ ರೀತಿಯ ಹಿಸ್ಸೆದಿಸ್ಸೆಯಾಗಿರುವುದಿಲ್ಲ ಎಂಬುದಾಗಿದೆ. ಸದರ ಪ್ರಕರಣದಲ್ಲಿ ಪ್ರತಿವಾದಿಯರು ಹಾಜರಾಗಿದ್ದರೂ ಸಹಿತ ತಮ್ಮ ಕೈಫಿಯತನ್ನು ಸಲ್ಲಿಸಿರುವುದಿಲ್ಲ. ಸದರ ಪ್ರಕರಣದಲ್ಲಿ 1 ನೇ ಪ್ರತಿವಾದಿಯು ವಾದಿಯರ ಮತ್ತು ಪ್ರತಿವಾದಿಯರ ತಂದೆ ಪೋತಿಯಾದ ನಂತರ

ಮನೆಯ ಒಟ್ಟು ಕುಟುಂಬದ ಹಿರಿಯನಾಗಿದ್ದು, ದಾವಾದಾಸ್ತಿಗಳನ್ನು 1 ರಿಂದ 4 ನೇ ಪ್ರತಿವಾದಿಯರ ತಮ್ಮ ಹೆಸರುಗಳನ್ನು ದಾವಾದಾಸ್ತಿಗಳನ್ನು ದಾಖಲಿಸಿಕೊಂಡಿರುವ ಬಗ್ಗೆ ವಾದ ಪತ್ರದಲ್ಲಿ ಕಂಡುಬರುತ್ತದೆ ಸಾಮಾನ್ಯವಾಗಿ ಪ್ರತಿವಾದಿಯರು ದಾವಾಸ್ವತ್ತುಗಳು ಒಟ್ಟು ಕುಟುಂಬದ ಆಸ್ತಿಗಳೆಂದು ಸಾಬೀತುಪಡಿಸದ ಹೊರತು, ಅವು ಒಟ್ಟು ಕುಟುಂಬದ ಆಸ್ತಿಗಳೆಂದು ಪರಿಗಣಿಸಬೇಕಾಗುತ್ತದೆ. ಒಂದು ವೇಳೆ ನ್ಯಾಯಾಲಯದವರು ತಾತ್ಕಾಲಿಕ ನಿರ್ಭಂಧಕಾಜ್ಞೆಯನ್ನು ನೀಡಿದರೆ ಪ್ರತಿವಾದಿಯರಗೆ ಯಾವುದೇ ನಷ್ಟ ಹಾಗೂ ಹಾನಿಯುಂಟಾಗುವುದಿಲ್ಲ. ಒಂದು ವೇಳೆ ಸದರಿ ಅರ್ಜಿಯನ್ನು ತಿರಿಸ್ಕರಿಸಿದರೆ ವಾದಿಯರ ಹಕ್ಕಿಗೆ ನಷ್ಟ ಉಂಟಾಗುತ್ತದೆ. ಆದ್ದರಿಂದ ಸದರ ಅಂಶ ನಂ.1 ರಿಂದ 3 ನ್ನು ಸಕಾರಾತ್ಮಕವಾಗಿ ಉತ್ತರಿಸಿದ್ದೇನೆ.

8. **ಅಂತ ನಂ.4ಃ** ಅಂಶ ನಂ. 1 ರಿಂದ 3 ಕ್ಕೆ ನೀಡಿದ ಕಾರಣ ಹಾಗೂ ಉತ್ತರಕ್ಕೆ ಅನುಗುಣವಾಗಿ ಈ ಕೆಳಗಿನಂತೆ ಆದೇಶಿಸಿದೆ.

## ಆದೇಶ

ಅರ್ಜಿದಾರ/1 ನೇ ವಾದಿ ಸಿ.ಪಿ.ಸಿ. ಕ್ರಮಾದೇಶ 39 ನಿಯಮ 1 ಮತ್ತು 2 ರನ್ವಯ ಸಲ್ಲಿಸಿರುವ ಮಧ್ಯಂತರ ಅರ್ಜಿ ಸಂಖ್ಯೆ-1 ನ್ನು ಪುರಸ್ಕರಿಸಿದೆ.

ವಾದಿಯರ ದಾವಾ ಶೆಡ್ಯುಲ್ ಪೈಕಿ 2(ಎ)3, 2(ಎ)5, 2(ಎ)6 ಮತ್ತು 2(ಎ)7 ನೇ ಆಸ್ತಿಗಳನ್ನು ಪ್ರತಿವಾದಿಯಾಗಲೀ ಅಥವಾ ಅವರ ತರ್ಫೆ ಬೇರೆ ಯಾರೇ ಆಗಲೀ ಮಾರಾಟ/ವಿಲೇವಾಟ ವ ಖಾತೆ ಬದಲಾವಣೆ ಮಾಡದಂತೆ ಅವರುಗಳ ಮೇಲೆ ದಾವೆ ಅಂತಿಮವಾಗಿ ನಿಖಾಲಿಯಾಗುವವರೆಗೆ ತಾತ್ಪೂರ್ತಿಕ ನಿರ್ಭಂದಕಾಜ್ಞೆಯನ್ನು ನೀಡಿದೆ.

ಖರ್ಚಿಗೆ ಸಂಬಂಧಿಸಿದಂತೆ ಯಾವುದೇ ಆದೇಶ ಇರುವುದಿಲ್ಲ.

(ಶೀಘ್ರಲಿಗಾರನಿಗೆ ನೇರವಾಗಿ ಕಂಪ್ಯೂಟರ ಮೇಲೆ ಉಕ್ತಲೇಖನವನ್ನು ಕೊಟ್ಟು ಅವರಿಂ ಬೆರಳಚ್ಚುಪಡಿಸಿ ಅದನ್ನು ಓದಿ ತಿದ್ದಿ ನಂತರ ನನ್ನ ಸಹಿಯನ್ನು ಹಾಕಿ, ತೆರೆದ ನ್ಯಾಯಾಲಯದಲ್ಲಿ ಆದೇಶವನ್ನು ದಿನಾಂಕಃ 17-02-2020 ರಂದು ಉಚ್ಚರಿಸಲಾಯಿತು).

**(ಶ್ರೀಮತಿ ಫಕೀರವ್ವ ಕೆಳಗೇರಿ)**
ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ಹಾನಗಲ್.